ಇ) ಕಾಟಿಪಾಳ್ಯ ಆರೋಗ್ಯ ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ

2237 - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವೆಷ್ಟು?

ಆ) ಈ ಅನುಪಾತವನ್ನು ಕೊಪ್ಪಳ ನಗರದಲ್ಲಿರುವ ಶಾಲೆಗಳಲ್ಲಿ ಕಾಯ್ದುಕೊಳ್ಳಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅನುಪಾತ ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳಾವುವು?

ಈ) ಅನುಪಾತ ಸರಿಪಡಿಸಲು ಕೊಪ್ಪಳ ತಾಲ್ಲೂಕಿನಲ್ಲಿ ಹೆಚ್ಚುವರಿ ಹುದ್ದೆಗಳಿಗೆ ಮಂಜೂರಾತಿ ನೀಡಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ 1:50

ಆ) ಕೊಪ್ಪಳ ನಗರದಲ್ಲಿ 10,774 ವಿದ್ಯಾರ್ಥಿಗಳಿಗೆ 189 ಶಿಕ್ಷಕರಿದ್ದು ಅನುಪಾತ 1:77 ಇರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ 27,776 ವಿದ್ಯಾರ್ಥಿಗಳಿಗೆ 340 ಶಿಕ್ಷಕರಿದ್ದು ಅನುಪಾತ 1:81 ಇರುತ್ತದೆ.

ಇ) ರಾಜ್ಯಾದ್ಯಂತ ಎಂಟನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಒಟ್ಟು 20,000 ಅಧಿಕ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗುತ್ತಿರುದ್ದು ಪ್ರಸ್ತುತ 95-96ನೇ ಸಾಲಿಗೆ 5000 ಅಧಿಕ ಹುದ್ದೆಗಳನ್ನು ಮಂಜೂರು ಮಾಡಿದೆ. ಅದರನ್ವಯ ಕೊಪ್ಪಳ ತಾಲ್ಲೂಕನ್ನು ಒಳಗೊಂಡಂತೆ ಅನುಪಾತ ಸರಿಪಡಿಸಲಾಗುವುದು.

ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ಭರ್ತಿ

2238 - ಶ್ರೀ ಸಂಗಪ್ಪ ಕರಡಿ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಖಾಲಿಯಿರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದೆಂದು ಸರ್ಕಾರ ಘೋಷಿಸಿರುವುದು ನಿಜವಲ್ಲವೇ?

ಆ) ಕೊಪ್ಪಳ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆಯಿರುವುದರಿಂದ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?